ಗ್ರಾಮೀಣಾಭಿವೃದ್ಧಿ ಕಛೇರಿಗಳಿಗೆ ಕಂಪ್ಯೂಟರೀಕರಣ.

1043 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮೀಣಾಭಿವೃದ್ಧಿ ಇಲಾಖಾ ಕಾರ್ಯದರ್ಶಿಗಳ ಕಚೇರಿಯನ್ನು ಕಂಪ್ಯೂಟರೀಕರಣ ಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? ಕಂಪ್ಯೂಟರೀಕರಣಗೊಳಿಸಿದ್ದರೆ ವಿವಿಧ "ಇ-ಮೇಲ್" ವಿಳಾಸಗಳ ಮಾಹಿತಿಯನ್ನು ನೀಡುವುದು.*

ಆ) *ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ಆಡಳಿತ ವ್ಯವಸ್ಥೆಯಲ್ಲಿ ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಬಗ್ಗೆ ಸಾಧಿಸಿರುವ ಪ್ರಗತಿ ಏನು? ವಿವರ ನೀಡುವುದು.*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಈಗಾಗಲೇ ಸಚಿವಾಲಯ, ಹಾಗೂ ಕಾರ್ಯದರ್ಶಿ ಮಟ್ಟದಲ್ಲಿ ಕಂಪ್ಯೂಟರೀಕರಣ ಗೊಳಿಸಲಾಗಿದೆ.ಕಾರ್ಯದರ್ಶಿಗಳ ಇ-ಮೇಲ್ ವಿಳಾಸಗಳು.

secrdpr(@)secreiat2.kar nic.in

adp(@)secreiat2.kar.nic in

ppmublr(@)br.vsnl.in

ಆ) ಪ್ರತಿ ಜಿಲ್ಲಾ ಪಂಚಾಯತಿಗಳಿಗೆ ಗಣಕೀಕರಣಕ್ಕಾಗಿ ರೂ.7.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ಗಣಕೀಕರಣ ಕಾರ್ಯ ಮುಗಿದಿದೆ ಆದರೆ ಉಡುಪಿ ಜಿಲ್ಲಾ ಪಂಚಾಯತ್ 31ನೇ ಮಾರ್ಚ್ 2000 ವೇಳೆಗೆ ಕಂಪ್ಯೂಟರ್ ಖರೀದಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ.

ಇಲಾಖೆಯಲ್ಲಿರುವ ಎಲ್ಲಾ ಯೋಜನೆಗಳ ಸಮಗ್ರ ಮಾಹಿತಿ ಎಂದರೆ ಯೋಜನೆಗಳ ವಿವರ, ಅದಕ್ಕೆ ಒದಗಿಸಲಾಗಿರುವ ಆಯವ್ಯಯ ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿ ಮತ್ತು ಸಾಧನೆ ಬಗ್ಗೆ ವಿವರಗಳನ್ನು ಗಣಕಯಂತ್ರದಲ್ಲಿ ಸಂಗ್ರಹಮಾಡಲಾಗಿದೆ.

ರಾಜ್ಯದಲ್ಲಿ ಜಾಗತಿಕ ಬ್ಯಾಂಕ್ ನೆರವಿನ ಯೋಜನೆಗಳು

1044 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ವಿವಿಧ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಜಾಗತಿಕ ಬ್ಯಾಂಕ್ ನೆರವಿನ ಯೋಜನೆಗಳು (ನೀರು ಸರಬರಾಜು ಮತ್ತಿತರ) ಅನುಷ್ಠಾನಗೊಳ್ಳಲು ವಿಳಂಬವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ? (ಯೋಜನೆಗಳ ವಿವರವನ್ನು ನೀಡುವುದು)*